# ಮರಳಿ ಬಂದ ಮೆಸ್ಸಿ



ಎಂಟು ತಿಂಗಳ ವನವಾಸದ ಬಳಿಕ ಲಿಯೊನೆಲ್ ಮೆಸ್ಸಿ ಮತ್ತೆ ತನ್ನ ರಾಷ್ಟ್ರೀಯ ತಂಡಕ್ಕೆ ಆಟವಾಡಲು ಮರಳಿದ್ದಾನೆ. ಅರ್ಜೆಂಟೈನಾದ ಈ ಅದ್ಭುತ ಫುಟ್‌ಬಾಲ್ ಆಟಗಾರ, ಕಳೆದ ವರ್ಷ ಫಿಫಾ ವಿಶ್ವಕಪ್ ಫುಟ್ಬಾಲ್ ಟೂರ್ನಿಯಲ್ಲಿ ದೇಶದ ಪರವಾಗಿ ಆಡಿದ ಬಳಿಕ 'ಸ್ವಯಂ ವನವಾಸ' ಘೋಷಿಸಿಕೊಂಡಿದ್ದ. ಅದಕ್ಕೆ ಕಾರಣ ವಿಶ್ವಕಪ್‌ನ 16ರ ಹಂತದಲ್ಲೇ ಅರ್ಜೆಂಟೈನಾ ತಂಡವು ಫ್ರಾನ್ಸ್ ವಿರುದ್ಧ 3–4 ಗೋಲುಗಳ ಸೋಲು ಅನುಭವಿಸಿ ಸ್ಪರ್ಧೆಯಿಂದ ಹೊರಬಿದ್ದದ್ದು. ವಿಶ್ವಾದ್ಯಂತ ಫುಟ್‌ಬಾಲ್ ಪ್ರೇಮಿಗಳು ಅರ್ಜೆಂಟೈನಾ ಸೆಮಿಫೈನಲ್‌ವರೆಗೆ ಖಂಡಿತ ಬರುತ್ತದೆ ಎಂಬ ನಿರೀಕ್ಷೆಯಲ್ಲಿದ್ದರು. ಆದರೆ 16ರ ಹಂತದಲ್ಲೇ ತಂಡ ಅನುಭವಿಸಿದ ದಯನೀಯ ಸೋಲಿನ ಹೊಣೆ ಹೊತ್ತ ಮೆಸ್ಸಿ, ರಾಷ್ಟ್ರೀಯ ತಂಡದಲ್ಲಿ ಆಟವಾಡುವುದಿಲ್ಲ ಎಂದು ಹೊರಗೆ ಕುಳಿತ. ಆ ಪಂದ್ಯದಲ್ಲಿ ಮೆಸ್ಸಿಗೆ ಒಂದು ಗೋಲು ಹೊಡೆಯಲೂ ಸಾಧ್ಯವಾಗಿರಲಿಲ್ಲ. ಈಗ ಆತನ ಸ್ವಯಂ ವನವಾಸಕ್ಕೆ ತೆರೆ ಬಿದ್ದಿದೆ. ಅರ್ಜೆಂಟೈನಾ ತಂಡದ ಮ್ಯಾನೇಜರ್ ಸ್ಕಾಲೊನಿ ರಾಷ್ಟ್ರೀಯ ತಂಡವನ್ನು ಪ್ರಕಟಿಸಿದ್ದು ಅದರಲ್ಲಿ ಮೆಸ್ಸಿಯ ಹೆಸರು ಸೇರ್ಪಡೆಯಾಗಿದೆ. ಈ ತಿಂಗಳ ಮೂರನೇ ಮತ್ತು ನಾಲ್ಕನೇ ವಾರದಲ್ಲಿ ವೆನೆಜುವೆಲ ಮತ್ತು ಮೊರಾಕ್ಕೋ ವಿರುದ್ಧ ಅರ್ಜೆಂಟೈನಾ ಎರಡು ಪಂದ್ಯಗಳನ್ನು ಆಡಲಿದ್ದು, ಅದರಲ್ಲಿ ಪಾಲ್ಗೊಳ್ಳುವುದಾಗಿ ಮೆಸ್ಸಿ ಹೇಳಿದ್ದಾನೆ.

ಮೆಸ್ಸಿ ಇವತ್ತಿಗೂ ಫುಟ್‌ಬಾಲ್ ಮಾಂತ್ರಿಕನೇ. ಬಾರ್ಸಿಲೊನಾ ಕ್ಲಬ್ ತಂಡದ ನಾಯಕನಾಗಿರುವ ಮೆಸ್ಸಿ, ಕ್ಲಬ್ ಟೂರ್ನಿಗಳಲ್ಲಿ ಅತ್ಯಧಿಕ ಗೋಲುಗಳನ್ನು ಗಳಿಸಿರುವ ಮತ್ತು ಕ್ಲಬ್ ಪರವಾಗಿ ಅತ್ಯಧಿಕ ಪಂದ್ಯಗಳನ್ನು ಆಡಿರುವ ದಾಖಲೆ ಹೊಂದಿದ್ದಾನೆ. ಈ ಸೀಸನ್‌ನಲ್ಲಂತೂ ಆತ ಬಾರ್ಸಿಲೊನಾ ತಂಡದ ಪರವಾಗಿ 33 ಪಂದ್ಯಗಳಲ್ಲಿ 34 ಗೋಲುಗಳನ್ನು ಗಳಿಸಿರುವುದು ದಾಖಲೆಯೇ. ಜೊತೆಗೆ ತಂಡದ ಪರವಾಗಿ ಇತರರು ಗಳಿಸಿದ 18 ಗೋಲುಗಳಲ್ಲಿ ಈತನ ಪಾಸಿಂಗ್ ನೆರವೂ ಇತ್ತು. ಮೆಸ್ಸಿಯ ನಾಯಕತ್ವ ಮತ್ತು ಆಟ ಎಷ್ಟು ಅದ್ಭುತವಾಗಿತ್ತೆಂದರೆ ತಂಡವು ಕೊಪಾ ಡೆಲ್ ರೆ ಫೈನಲ್‌ಗೆ ತಲುಪಿದೆ. ಹಾಗೆಯೇ ಚಾಂಪಿಯನ್ಸ್ ಲೀಗ್‌ನಲ್ಲಿ ತನ್ನ ಕಡು ಪ್ರತಿಸ್ಪರ್ಧಿ ರಿಯಲ್ ಮ್ಯಾಡ್ರಿಡ್ ತಂಡವನ್ನೂ ಸೋಲಿಸಿ ಮುನ್ನಡೆದಿದೆ.

31ರ ಹರೆಯದ ಮೆಸ್ಸಿ 'ತನ್ನ ರಾಷ್ಟ್ರಕ್ಕಿಂತ ಹೆಚ್ಚಾಗಿ ಕ್ಲಬ್ ತಂಡವನ್ನೇ ಪ್ರೀತಿಸುತ್ತಾನೆ' ಎನ್ನುವ ಆರೋಪ ಈಗಲೂ ಇದೆ. 'ಆತ ರಾಷ್ಟ್ರಗೀತೆಯನ್ನೂ ಧ್ವನಿಯೆತ್ತಿ ಹಾಡುವುದಿಲ್ಲ. ರಾಷ್ಟ್ರದ ಪರವಾಗಿ ಎ ಲೀಗ್‌ನಲ್ಲಿ ಒಂದೇ ಒಂದು ಪಂದ್ಯವನ್ನೂ ಆಡದೆ ರಾಷ್ಟ್ರೀಯ ತಂಡಕ್ಕೆ ಪ್ರವೇಶ ಪಡೆದವನೀತ. ಇವನಿಗೆ ರಾಷ್ಟ್ರಪ್ರೇಮ ಕಡಿಮೆ' ಎನ್ನುವ ಮೆಸ್ಸಿ ಟೀಕಾಕಾರರ ಸಂಖ್ಯೆ ದೊಡ್ಡದಿದೆ. ಅದೇ ವೇಳೆ ಆತನ ಪ್ರತಿಯೊಂದು ಗೋಲುಗಳನ್ನೂ ಕಣ್ಣಲ್ಲಿ ತುಂಬಿಕೊಂಡು ಹಾಡಿ ಹೊಗಳುವ ಕೋಟ್ಯಂತರ ಅಭಿಮಾನಿಗಳೂ ಇದ್ದಾರೆ. ತಂಡದಲ್ಲಿ ಮೆಸ್ಸಿ ಆಡುತ್ತಿದ್ದರೆ ಒಬ್ಬನೇ ಮೂವರ ಕೆಲಸವನ್ನು ಮಾಡುತ್ತಾನೆ ಎನ್ನುವುದು ತಜ್ಞರ ಮಾತು. ಪಂದ್ಯದಲ್ಲಿ ಗೋಲು ಹೊಡೆಯದಿದ್ದರೂ ಮುನ್ನಡೆ ಆಟಗಾರನಾಗಿ ಇತರರು ಗಳಿಸುವ ಗೋಲಿನಲ್ಲಿ ಮೆಸ್ಸಿಯ ಕಾಲ್ಚಳಕ ಇದ್ದೇ ಇರುತ್ತದೆ. ಆದರೆ ಹೆಚ್ಚಾಗಿ ಅಂತರ್ಮುಖಿಯಾಗಿರುವ ಮೆಸ್ಸಿ ತನ್ನ ಮೇಲಿನ ದೂರುಗಳ ಬಗ್ಗೆ ಸ್ಪಷ್ಟೀಕರಣವನ್ನೂ ಕೊಡುವುದಿಲ್ಲ. ಹಾಗಿದ್ದೂ ಮೆಸ್ಸಿಯ ಜನಪ್ರಿಯತೆ ಬೆಳೆಯುತ್ತಲೇ ಇದೆ. ಈತನ ಖ್ಯಾತಿ ಎಷ್ಟೆಂದರೆ, 'ಅರ್ಜೆಂಟೈನಾದಲ್ಲಿ ಕೋಕಾ ಕೋಲದ ಹೆಸರು ಗೊತ್ತಿಲ್ಲದವರು ಇರಬಹುದು, ಆದರೆ ಮೆಸ್ಸಿ ಹೆಸರು ಗೊತ್ತಿಲ್ಲದವರಿಲ್ಲ' ಎನ್ನುವುದು ಫೇಮಸ್ ಸ್ಟೇಟ್‌ಮೆಂಟ್! ಅರ್ಜೆಂಟೈನಾ ಮಾತ್ರವಲ್ಲ, ಫುಟ್‌ಬಾಲ್ ಆಡುವ, ನೋಡುವ ವಿಶ್ವದ ಎಲ್ಲ ದೇಶಗಳಲ್ಲೂ ಈತ ಸೂಪರ್‌ಸ್ಟಾರ್. ಸಾಮಾಜಿಕ ಜಾಲತಾಣಗಳಲ್ಲಿ ಈತನ ಅಭಿಮಾನಿಗಳ ಸಂಖ್ಯೆ 18.1 ಕೋಟಿ ದಾಟಿದೆ. ಇನ್‌ಸ್ಟಾಗ್ರಾಂ ಒಂದರಲ್ಲೇ 9.3 ಕೋಟಿ ಬೆಂಬಲಿಗರಿದ್ದಾರೆ. ಅಷ್ಟಾಗಿಯೂ ಮೆಸ್ಸಿಗೆ ನಿರರ್ಗಳವಾಗಿ ಇಂಗ್ಲಿಷ್ ಮಾತನಾಡಲು ಬರಲ್ಲ ಎನ್ನುವುದು ಕುತೂಹಲಕರ. ಆತನದ್ದೇನಿದ್ದರೂ ಸ್ಪಾನಿಶ್ ಮಾತು.

ಗಳಿಕೆಯ ಲೆಕ್ಕ ಹಾಕಿದರೂ ಈತ ಯೂರೋಪಿನ ಅತ್ಯಂತ ಹೆಚ್ಚು ಸಂಭಾವನೆ ಪಡೆಯುವ ಫುಟ್‌ಬಾಲಿಗ. ತಿಂಗಳಿಗೆ 73 ಲಕ್ಷ ಪೌಂಡ್ ಆದಾಯ. ಈ ವಿಷಯದಲ್ಲಿ ವಿಶ್ವದ ನಂಬರ್ ಒನ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೋನನ್ನೂ ಮೆಸ್ಸಿ ಮೀರಿ ಮುನ್ನಡೆದಿದ್ದಾನೆ. ಅಡಿಡಾಸ್, ಪೆಪ್ಸಿ, ಕೊನಾಮಿ, ಜಿಲ್ಲೆಟ್ ಮಾತ್ರವಲ್ಲ, ನಮ್ಮ ಟಾಟಾ ಮೋಟಾರ್ಸ್‌ಗಳೂ ಮೆಸ್ಸಿಯೇ ಜಾಹೀರಾತು ರಾಯಭಾರಿ. 2021ರವರೆಗೆ ಬಾರ್ಸಿಲೊನಾ ಕ್ಲಬ್ ಪರವಾಗಿ ಆಡಲು ಒಪ್ಪಂದ ಮಾಡಿಕೊಂಡಿರುವ ಮೆಸ್ಸಿ, ಅದಕ್ಕಾಗಿ ಪಡೆದಿರುವ ಮೊತ್ತ ವರ್ಷಕ್ಕೆ 3.3 ಕೋಟಿ ಡಾಲರ್. ಈ ಒಪ್ಪಂದ ಇರುವಾಗಲೇ ಬೇರೆ ಕ್ಲಬ್‌ನವರು ಮೆಸ್ಸಿಯನ್ನು ಖರೀದಿಸಬೇಕೆಂದರೆ ಕ್ಲಬ್‌ಗೆ 8.54 ಕೋಟಿ ಡಾಲರ್ ನೀಡಬೇಕು! ಹಾಗೆಂದೂ ಒಪ್ಪಂದದಲ್ಲಿದೆ.

ಮೆಸ್ಸಿಯ ಫುಟ್‌ಬಾಲ್ ಪ್ರೇಮದ ಬಗ್ಗೆ ಎರಡು ಮಾತಿಲ್ಲ. ಫುಟ್‌ಬಾಲ್‌ಗೆಂದೇ ಆತ ಮನೆಯಲ್ಲೊಂದು ಮ್ಯೂಸಿಯಂ ಮಾಡಿದ್ದಾನೆ. ಅಲ್ಲಿ ಆಟವಾಡಿದ ಚೆಂಡು, ಟ್ರೋಫಿ, ಫುಟ್‌ಬಾಲ್ ಶರ್ಟ್‌ಗಳು ಎಲ್ಲವೂ ಇವೆ. ಈ ಶರ್ಟುಗಳಲ್ಲಿ ಆತನ ಸಹೋದ್ಯೋಗಿಗಳು, ಖ್ಯಾತನಾಮ ಆಟಗಾರರು ಸಹಿ ಹಾಕಿದ ಶರ್ಟ್‌ಗಳಲ್ಲದೆ, ವಿರೋಧಿ ಆಟಗಾರರು ಸಹಿ ಹಾಕಿದ್ದೂ ಇವೆ. ಬಾಲ್ಯದ ಗೆಳತಿಯನ್ನು ಮೂರು ವರ್ಷಗಳ ಹಿಂದೆ ಮದುವೆಯಾಗಿ ಎರಡು ಮಕ್ಕಳ ತಂದೆಯಾಗಿರುವ ಮೆಸ್ಸಿ ಮತ್ತೆ ದೇಶದ ಪರವಾಗಿ ಆಡಿ ಹೆಚ್ಚು ಗೋಲು ಗಳಿಸುವಂತಾಗಲಿ. ಮುಂದಿನ ಫಿಫಾ ವಿಶ್ವಕಪ್‌ನಲ್ಲಿ ತನ್ನ ದೇಶಕ್ಕೆ ಟ್ರೋಫಿ ಗೆದ್ದುಕೊಡುವಂತಾಗಲಿ.

■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65